

# ಕೊರೊನಾ ವೈರಸ್ ಆಗ್ಬೇಡಿ ನರ್ವಸ್!

**ಜನಜೀವನವನ್ನು ತಲ್ಲಣಗೊಳಿಸುವಂತೆ ಮಾಡಿದ ಕೋವಿಡ್– 19 ವೈರಾಣು ತಗುಲದಂತೆ ಎಚ್ಚರಿಕೆ ವಹಿಸಬೇಕು. 'ಪ್ರಿವೆನ್ಶನ್ ಈಸ್ ಬೆಟರ್ ದೆನ್ ಕ್ಯೂರ್' ಎಂಬ ಮಾತು ಈ ವೈರಸ್ ಮಟ್ಟಿಗೆ ಅತ್ಯಂತ ಸೂಕ್ತವಾದದ್ದು.**

■ ಉಮಾ ಅನಂತ್

ಅದು 2009ರ ಮಾರ್ಚ್ ತಿಂಗಳು. ವಿಶ್ವದೆಲ್ಲೆಡೆ ಎಚ್1ಎನ್1 ವೈರಾಣು ಸೋಂಕು ಭಾರೀ ಸದ್ದು ಮಾಡಿತ್ತು. ಅಮೆರಿಕ ಮತ್ತು ಮೆಕ್ಸಿಕೊದಿಂದ ಬಂದ ಈ ವೈರಸ್, ಮೇ 13ರಂದು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬನ ಮೂಲಕ ತಲುಪಿ ನಮ್ಮಲ್ಲೂ ಜನರನ್ನು ಭಯದಿಂದ ತಲ್ಲಣಗೊಳಿಸಿತ್ತು. ಅದು ಹಂದಿಜ್ವರ (ಸ್ವಾನ್ ಫ್ಲ್ಯೂ). ಅದಾಗಿ ಸರಿಸುಮಾರು ಹತ್ತು ವರ್ಷಗಳ ನಂತರ ಇದೀಗ ಮತ್ತೊಂದು ವೈರಾಣು ಇಡೀ ಜಗತ್ತನ್ನೇ ಅಲುಗಾಡಿಸಿಬಿಡುತ್ತಿದೆ. ಕೋವಿಡ್–19 ಹೆಸರಿನ ಈ ವೈರಸ್ ಹತ್ತಿಕ್ಕುವುದು ಜಗತ್ತಿನ ಆರೋಗ್ಯ ಕ್ಷೇತ್ರಕ್ಕೇ ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ.



ಡಾ.ಎಂ.ಬಿ. ರಾಮಮೂರ್ತಿ